**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 94/2020**

**ಚಾ.ಸಾಃ 5, ಪ್ರಾ.ಸಾಃ 9**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ನಾಯ್ಕ |
| ತಂದೆಯ ಹೆಸರು | ಗಣಪತಿ ನಾಯ್ಕ |
| ವಯಸ್ಸು | 32 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಎಮ್ಮೆಪೈಲ್, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 10-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದ್ದೇನೆ.

ದಿನಾಂಕ 04-08-2020 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಅಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಇದ್ದರು. ನಂತರ ಪೋಲೀಸರು ನಮ್ಮನ್ನು ಆರೋಪಿತರ ಜೊತೆ ಚಂದಾವರದಲ್ಲಿ ಎರಡು ಕಡೆ, ಹೆಬ್ಬಾರ್ನಕೆರೆ, ನವಿಲಗೋಣ, ಕಡತೋಕಾ, ಹಳದೀಪುರ, ಜಡ್ಡಿಗದ್ದೆ ಮತ್ತು ಹೊನ್ನಾವರದಲ್ಲಿ ಎರಡು ಕಡೆ ಮತ್ತು ಇತರೇ ಹಳ್ಳಿಗಳಿಗೆ ಕರೆದಕೊಂಡು ಹೋಗಿ ಒಂದೊಂದು ಮನೆಯ ಹತ್ತಿರ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ. ನಂತರ ಹಳದೀಪುರದಲ್ಲಿ ಪಂಚನಾಮೆಗೆ ಸಹಿ ಹಾಕಿಸಿಕೊಂಡಿರುತ್ತಾರೆ. ಈಗ ಪಂಚನಾಮೆಯ ದೃಢೀಕೃತ ನಕಲನ್ನು ನೋಡುತ್ತಿದ್ದು ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-19 ರಿಂದ 21 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ನಾನು ರಿಕ್ಷಾ ಸ್ಟಾಂಡನಲ್ಲಿ ಇದ್ದೆ. ಪೋಲೀಸರು ಪಂಚನಾಮೆಗೆ ಬರಬೇಕು ಎಂದು ಕರೆದಿರುತ್ತಾರೆ. ಆದ್ದರಿಂದ ಹೋಗಿರುತ್ತೇನೆ. ನನ್ನನ್ನು ಸುಮಾರು 12-00 ಗಂಟೆಗೆ ಕರೆದಿರುತ್ತಾರೆ. ಪೋಲೀಸರು ನನ್ನನ್ನು ಮೊದಲು ನವಿಲಗೋಣಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ 15 ರಿಂದ 20 ನಿಮಿಷ ಇದ್ದೆವು. ಪಂಚನಾಮೆಯ ಕಾಲಕ್ಕೆ ಮನೆಯವರು ಇದ್ದರು, ಜನ ಸೇರಿರಲಿಲ್ಲ. ಅಲ್ಲಿಂದ ಕಡತೋಕದ ತೆಂಗೇರಿಗೆ ಕರೆದುಕೊಂಡು ಹೋಗಿರುತ್ತಾರೆ. ನವಿಲಗೋಣದಿಂದ ಕಡತೋಕಾ ಎಷ್ಟು ದೂರ ಇದೆ ನನಗೆ ಗೊತ್ತಿಲ್ಲ. ಒಂದು ಗಂಟೆ ಸಮಯದಲ್ಲಿ ಪಂಚನಾಮೆ ಮುಗಿದಿರುತ್ತದೆ. ಯಾವ ಊರಿನಿಂದ ಯಾವ ಊರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂಬುದನ್ನು ನಿಖರವಾಗಿ ಹೇಳಲಾಗುವುದಿಲ್ಲ. ಕೊನೆಯ ಪಂಚನಾಮೆಯನ್ನು ಹಳದೀಪುರದಲ್ಲಿ ಮಾಡಿರುತ್ತಾರೆ. ಹಳದೀಪುರದಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಾನು ಇದೇ ಪ್ರಕರಣಕ್ಕೆ ಸಂಬಂಧಪಟ್ಟ 4 ಕೇಸುಗಳಲ್ಲಿ ಸಾಕ್ಷಿ ನುಡಿದಿದ್ದೇನೆ.

**ಚಾ.ಸಾಃ 5, ಪ್ರಾ.ಸಾಃ 9**

ಪಂಚನಾಮೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನಾವು ಹೋದ ಸ್ಥಳಗಳಲ್ಲೆಲ್ಲ ಫೋಟೋ ತೆಗೆದಿರುತ್ತಾರೆ. ಪೋಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗದೇ ಪೋಲೀಸ್ ಠಾಣೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**